92—4—42

ಸತ್ಯವಾದಿ

ಬಿ ಸೆಕ್ಷ್ ೯

ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದುದು

Proprietors — Satyavadi Ltd, Mysore

NEXT CHANGE AT

NEW OPERA TALKIES

(The Beauty Spot of Mysore)

ಪಾಂಡುರಂಗನ್

ಸಕಲರೂ ನೋಡಲೇ ಬೇಕಾದ ಅಮೋಘ ಚಿತ್ರ

ಯಾರ ಜಯವನ್ನು ಭಾರತೀಯರು ಬಯಸಬೇಕು?

ಮಿತ್ರಮಂಡಲಿಗೆ ಜಯವನ್ನು ಏಕೆ?

ಜಪಾನಿಯರಿಂದ ಭಾರತೀಯರಿಗೆ ಮೊಕ್ಷವಾಗದು. ಇನ್ನೂ ಹಾನಿಯೇ ಸರಿ. ಜೈನ ದೇಶವೇ ಇದಕ್ಕೆ ಸಾಕ್ಷಿಯಾಗಿದೆ ಇನ್ನು ಆ ನರಾಧಮನಾದ ಹಿಟ್ಲರನಿಂದಲೋ ಅಂದರೆ ಶ್ವೇತವರ್ಣದ ಯೂರೋಪಿನ ಜನಾಂಗಗಳೇ ಆತನ ಪಾಶಕ್ಕೆ ಬಿದ್ದು ದಿಕ್ಕು ಕಾಣದೆ ತಲ್ಲಣಿಸುತ್ತಿರುವಾಗ ಅವನು ಕಪ್ಪು ಜನರನ್ನು ಲಕ್ಷಿಸುವುದು ಸುಳ್ಳು.

ಎಂದಿಗಾದರೂ ಭಾರತಕ್ಕೆ ಮಿತ್ರಮಂಡಲಿಯವರೇ ಮಿತ್ರರು. ಇಂದಲ್ಲ ನಾಳೆಯಾದರೂ ಬಿಟಿಷರು ತಾವಾಗಿಯೇ ಭಾರತಕ್ಕೆ ಸ್ವತಂತ್ರವನ್ನು ಕೊಡುತ್ತಾರೆ. ಕೊಟ್ಟೇ ಕೊಡುವರು. ಆದುದರಿಂದ ಭಾರತೀಯರು ತಮ್ಮ ತನು ಮನ ಧನಗಳನ್ನು ಯುದ್ಧವಿಜಯಕ್ಕಾಗಿ ಆಂಗ್ಲೇಯರಿಗೆ ಅರ್ಪಿಸುವುದು ಕರ್ತವ್ಯವಾಗಿರುತ್ತದೆ.

ಪಾಕಿಸ್ಥಾನದ ರುಚಿ ಇದೆಯೆ

ಏ॥ ಜಿನ್ನಾರವರು ತಮ್ಮ ಮನೆಗೆ ಪತ್ರಿಕಾ ಪ್ರತಿನಿಧಿಗಳನ್ನು ಒಪ್ಪಮಾಡಿಕೊಂಡು ನಂತರ ಹಿಂದೂಸ್ಥಾನ್ ಟೈಮ್ಸ್ ಪತ್ರಿಕಾ ಪ್ರತಿನಿಧಿಯನ್ನು ಹೊರಗಟ್ಟಿದರಂತೆ! ಎಲ್ಲಾ ಪ್ರತಿನಿಧಿಗಳು ವಾಪಸ್ಸು ಬಂದರಂತೆ.

ಹಾಲು ಪಾನೀಯಗಳು ನಮ್ಮಲ್ಲಿ ಒಂದು

ವಿಶೇಷವೇ ಸರಿ!

ಕೆನೆ, ಬೆಣ್ಣೆ ಅತಿ ಮಧುರವಾದ ಕೀಮ್, ಮೊಸರು

ಇವುಗಳಿಗೆ ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ.

ಸಿಟಿ ಸನ್ನಿ ಡೈರಿ

ಟೆಲಿಫೋನ್ ನಂಬರು 402

ಹಳೇ ಪೋಸ್ಟಾಫೀಸ್ ರಸ್ತೆ, :: ಮೈಸೂರು

ಬಿ ಸೆಕ್ಷ್ ೯
ಳಪುಟ
೩ ಪೈ
"ಎ" ಸೆಕ್ಷ್ ೯
ತಪ್ಪದೆ ಓದಿ
ಬಿಡಿಪ್ರತಿ 3 ಪೈ

ರಷ್ಯಾ

(ಕಳೆದ ವಾರದಿಂದ ಮುಂದುವರಿದುದು)

ಪ್ರತಿ ಜಿಲ್ಲೆಯಲ್ಲಿಯೂ 4–5 ಟ್ರಾಕ್ಟರು ಸ್ಟೇಷ್ನಗಳಿರುತ್ತವೆ. ಈ ಕಲೆಕ್ಟಿವ್ ಫಾರಂನ ವರು ಅಲ್ಲಿಗೆ ಹೋಗಿ ನಮಗೆ ಇಷ್ಟು ಟ್ರಾಕ್ಟರುಗಳು ಬೇಕಾಗಿವೆ ನಮ್ಮ ಫಾರಂನ ವಿಸ್ತೀರ್ಣವಿಷ್ಟು ಎಂದು ಬರೆದು ಅರ್ಜಿ ಹಾಕಿಕೊಂಡಲ್ಲಿ, ಕೂಡಲೆ ಇನ್ಸ್ಪೆಕ್ಟರುಗಳನ್ನು ಕಳಿಸಿ, ಅಜಮಾಯಿಷಿ ಮಾಡಿಸಿ ಟ್ರಾಕ್ಟರುಗಳನ್ನು ಒದಗಿಸಿಕೊಡುವರು ಸಾಧಾರಣವಾಗಿ ಟ್ರಾಕ್ಟರುಗಳ ಬೆಲೆಯನ್ನು 10 ವರ್ಷಗಳೊಳಗೆ ಸಲ್ಲಿಸಬೇಕಾಗಿರುತ್ತದೆ. ಶೇಕಡಾ 2 ಮೇರೆಗೆ ಬಡ್ಡಿ. ಈ ಬಡ್ಡಿಯನ್ನು ಫಸಲು ಕೈಗೆ ಬಂದ ಕೂಡಲೆ ಸಲ್ಲಿಸಬೇಕಾಗಿರುತ್ತದೆ. ಅವುಗಳ ವಿನಿಯೋಗವನ್ನು ತದೆಮಾಡದೆ ಕಟ್ಟುತ್ತಿರಬೇಕು. ಬೆಳೆಯು ಕಟ್ಟುಹೋದರೆ ಈ ಹಣವನ್ನು ಕೊಡುವದು ಕಷ್ಟವಾಗುವುದಷ್ಟೆ. ಇದಕ್ಕೆಂಗಿ ಸರ್ಕಾರದವರೇ ಬೆಳೆಯನ್ನು ಇನ್ಷೂರ್ ಮಾಡುವರು. ಆದುದರಿಂದ ಯಾವ ವರ್ಷದಲ್ಲಿಯಾದರೂ ಬೆಳೆಯಾಗದಿದ್ದಲ್ಲಿ ಉಪವಾಸವಿರಬೇಕೆಂಬ ಭಯವಿರುವದಿಲ್ಲ.

ಸಂವತ್ಸರದದ್ದಕ್ಕೂ ದಿನಂಪ್ರತಿ ಕೂಲಿಗಳನ್ನು ಕೊಡಲು, ಗೊಬ್ಬರಕ್ಕೆ ಕೆಂಡಮಂಗಾರ್ಡನ್ನಿಗೆ, ಸಿನಿವಾಗಳಿಗೆ ವ್ಯಯಮಾಡಲು ನಗದು ಹಣವೆಲ್ಲಿರುತ್ತದೆಂದು ಪ್ರಶ್ನೆ ಬರುವದು. ಪ್ರತಿ ಕಲೆಕ್ಟಿವ್ ಫಾರಂಮ್ಗೂ ಒಂದೋ, ಎರಡೋ ಕಾಖರ್ಾನೆಗಳನ್ನು ನಡಿಸುತ್ತಿರುತ್ತದೆ. ಆ ಕಾಖರ್ಾನೆಗಳಿಂದ ಬರುವ ವರಮಾನದಿಂದ ದಿನ ಚರಿ ಖರ್ಚುಗಳಿಗೆ ವ್ಯಯಮಾಡುವರು. ಲೇವಾದೇವಿಗಳೆಲ್ಲಾ ಸರ್ಕಾರದ ಬ್ಯಾಂಕಿನ ಮೂಲಕ ನಡೆಯುತ್ತಿರುತ್ತದೆ.

ಕಲೆಕ್ಟಿವ್ ಫಾರಂಗಳು ಕೂಡ ಸರ್ಕಾರಕ್ಕೆ ತೆರಿಗೆಯನ್ನು ಸಲ್ಲಿಸುತ್ತವೆ. ಕಲೆಕ್ಟಿವ್ ಫಾರಂಗಳಿಗೆ ಪ್ರೋತ್ಸಾಹವನ್ನು ಕೊಡಲು ಬಹಳ ಕಡಮೆ ತೆರಿಗೆಗಳನ್ನು ನಿಯಾನುಂಕ ಮಾಡಿರುವರು. ತೆರಿಗೆಯು ಸಾಧಾರಣವಾಗಿ ಬೆಳೆಯುವ ಧಾನ್ಯವನ್ನನುಸರಿಸುತ್ತದೆ. ಆಲೂಗಡ್ಡೆ ವ್ಯವಸಾಯದ ಮೇಲೆ ತೆರಿಗೆಯು ಶೇಕಡಾ 7 ರಿಂದ 9 ರವರೆಗೂ ಇರುತ್ತದೆ. ಧಾನ್ಯಗಳ ಮೇಲೆ ತೆರಿಗೆ ಶೇಕಡಾ ಎರಡು. ನೋಡಿ. ಸೋವಿಯಟ್ ರಾಜ್ಯದಲ್ಲಿ ತೆರಿಗೆಗಳು ಎಷ್ಟು ಕಡಿಮೆಯೋ!

ಈ ಕಲೆಕ್ಟಿವ್ ಫಾರಂ ಅಲ್ಲದೆ ಸೋವಿಯಟ್ ರಷ್ಯಾದಲ್ಲಿ ಸರ್ಕಾರದ ಫಾರಂಗಳು ಕೂಡ ಇರುವವು. ಈ ಸರ್ಕಾರದ ಫಾರಂಗಳು ಸಾಧಾರಣವಾಗಿ 70,000–80 000 ಎಕರೆಗಳ ವಿಸ್ತೀರ್ಣವಾಗಿರುತ್ತವೆ. ಈ ಫಾರಂಗಳಲ್ಲಿ ಕೆಲಸ ಮಾಡುವವರಿಗೆಲ್ಲಾ ಸಂಬಳಗಳಿರುತ್ತವೆ ಪಶುಗಳು, ವ್ಯವಸಾಯದ ಪರಿಕರಗಳು, ಟ್ರಾಕ್ಟರುಗಳು ಬೆಳೆದ ಫಸಲು ಈ ಎಲ್ಲಾ ಸರ್ಕಾರದ ಸ್ವಂತವಾಗಿರುತ್ತವೆ. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಕೆಲಸವು ಹೇಗೆ ನಡೆಯುವುದೋ ಸರಿಯಾಗಿ ಗಂಟೆಯು ಹೊಡೆಯುವ ವೇಳೆಗೆ ಎಲ್ಲರೂ ಕೆಲಸದ ಮೇಲೆ ಹಾಜರಾಗುವುದು. ದಿನಕ್ಕೆ ಏಳು ಗಂಟೆ ಕಾಲ ಕೆಲಸ ಮಾಡವದು. ಎಲ್ಲಾ ಯಂತ್ರಗಳ ಮೂಲಕ ಕೆಲಸ ಮಾಡಿಸುವದು, ಇವೆಲ್ಲಾ ಒಂದು ವಿಲಿಟರಿ ಹಾಗಿರುತ್ತದೆ. ಕ್ರಮವನ್ನನುಸರಿಸಿ ಎಲ್ಲಾ ಕಾರ್ಯಗಳೂ ನಡೆಯುವದರಿಂದ ಫಸಲು ಬಹಳ ಚನ್ನಾಗಿ ಬೆಳೆಯುತ್ತದೆ. ಯಾವುದಾದರೂ ಲೋಪ ಕಂಡು ಬಂದಿತೆಂದರೆ—ತಪ್ಪು ಮಾಡಿದವನು ದೊಡ್ಡ ಅಧಿಕಾರಿಯಾಗಲಿ, ಸಣ್ಣ ಸಂಬಳದವನಾಗಲಿ ಶಿಕ್ಷೆಯನ್ನು ಅನುಭವಿಸಬೇಕಾದೆದ್ದೇ

ರಷ್ಯಾದಲ್ಲಿ ವಿಜ್ಞಾನದ ಅಭಿವೃದ್ಧಿ ಹೇಗೋ, ವ್ಯವಸಾಯದ ಅಭಿವೃದ್ಧಿಯೂ ಹಾಗೆಯೇ. ಎಲ್ಲಾ ಒಂದು ನಿಯಮವನ್ನನುಸರಿಸಿ ನಡೆಯಬೇಕು ಕಲೆಕ್ಟಿವ್ ಫಾರಂಗಳಲ್ಲಿ ಯಾವ ಯಾವ ಫಸಲುಗಳನ್ನು ಈ ವರ್ಷ ಬೆಳಿಸಬೇಕೋ, ಎಷ್ಟು ಎಕರೆಗಳ ಭೂವಿಯನ್ನು ಒಂದೊಂದು ಫಸಲನ್ನು ಬೆಳೆಸಲು ಉಪಯೋಗಿಸಬೇಕೋ ಯಾವ ಯಾವ ಬೆಳೆಯನಂತರ ಯಾವ ಯಾವ ಬೆಳೆಯನ್ನು ಬೆಳೆಸಬೇಕೋ ಯಾವ ಬೆಳೆಗೆ ಯಾವ ಗೊಬ್ಬರವನ್ನು ಪಯೋಗಿಸಬೇಕೋ ಈ ಎಲ್ಲವು ಒಂದು ಕ್ರಮವನ್ನನುಸರಿಸಿ ನಡೆಯಬೇಕು. ಇಡೀ ದೇಶಕ್ಕೆ ಹಾಕಲ್ಪಟ್ಟ ನಿಯಮದಲ್ಲಿ ಒಂದು ಸಣ್ಣ ಕಲೆಕ್ಟಿವ್ ಫಾರಂಮಿನ ನಿಯಮವು ಕೂಡ ಸರಿಹೋಲಬೇಕಾಗಿರುತ್ತದೆ. ಯಾವಾಗಲೂ ವಿರುದ್ಧವಾಗಿರಕೂಡದು.

ನೀವು ಫಲಾನಿ ಬೆಳೆಗಳನ್ನು ಬೆಳೆಸತಕ್ಕದ್ದು. ಇಷ್ಟು ಇಷ್ಟು ಎಕರೆಗಳನ್ನು ಇಂಥಿಂಥಾ ಬೆಳೆಗಳಿಗೆ ಉಪಯೋಗಿಸತಕ್ಕದ್ದು ಹೀಗೆಂದು ಜಿಲ್ಲಾ ಸೋವಿಯಟ್ಗಾರರು ಕಲೆಕ್ಟಿವ್ ಫಾರಂನವರಿಗೆ ಆಜ್ಞೆ ಮಾಡುವರು. ತರುವಾಯ ವಿವರಗಳನ್ನು ಜಿಲ್ಲಾ ಸೋವಿಯಟ್ನ ಸಲಹೆಯಂತೆ ಫಾರಂನವರ ನಿರ್ಧರಿಸಿ, ಪುನಃ ಜಿಲ್ಲಾ ಸೋವಿಯಟ್ರ ಅನುಜ್ಞೆಯನ್ನು ಹೊಂದಿ ಕೆಲಸ ಮಾಡತಕ್ಕದ್ದು. ಮೊದಲು ಪೂರ್ತಿಯಾಗಿ ನಿರ್ಣಯಿಸಲ್ಪಟ್ಟ ಪ್ಲಾನನ್ನು, ಕಲೆಕ್ಟಿವ್ ಫಾರಂ ಮಿಟಿಂಗಿನಲ್ಲಿ ಗಂಡಸರೂ ಹೆಂಗಸರೂ ಕಲೆತು ವಾದವಿವಾದಗಳನ್ನು ಮಾಡಿ ಒಪ್ಪಿತವಾಗಿದ್ದಲ್ಲಿ ಒಪ್ಪುವರು; ಇಲ್ಲದಿದ್ದರೆ ಬದಲಾವಣೆಗಳನ್ನು ಮಾಡುವರು. ಆ ಪ್ಲಾನೇ ನಿರಾಕರಿಸಲ್ಪಟ್ಟಲ್ಲಿ ಬೇರೆ ಪ್ಲಾನನ್ನು ಅಂಗೀಕರಿಸುವರು. ಎಲ್ಲರ ಒಪ್ಪಿಗೆಯನ್ನು ಹೊಂದಿದ ಪ್ಲಾನು ಪುನಃ ಡಿಸ್ಟ್ರಿಕ್ಟ್ ಸೋವಿಯಟ್ಸ್ರಿಗೆ ಕಳುಹಿಸಲ್ಪಟ್ಟು ಅವರ ಸಮ್ಮತಿಯನ್ನು ಪಡೆದು ಆ ವರ್ಷವೆಲ್ಲಾ ಅವನ್ನನುಸರಿಸಿ ಕೆಲಸಗಳನ್ನು ನಡಿಸುವರು.

ಮೊದಲನೆಯ ವರ್ಷ ಕಲೆಕ್ಟಿವ್ ಫಾರಂಗಳು ಅಷ್ಟು ಜಯಪ್ರದವಾಗಿ ಕೆಲಸ ಮಾಡಲಾಗಲಿಲ್ಲ. ವ್ಯವಸಾಯದಾರರು ನಮ್ಮ ಆಸ್ತಿಗಳನ್ನು ಎಲ್ಲರ ಆಸ್ತಿಗಳೊಂದಿಗೆ ಕಲಿಸಿಬಿಡಲಾಗುವದೇ? ನನ್ನ ಜಮೀನು ನನಿಗೇ ಇರಬೇಕು; ನನ್ನ ಹಸುಗಳು ನನ್ನ ಹಿತ್ತಲಲ್ಲೇ ಇರಬೇಕು; ಎಂಬ ಅಂಧಕಾರದಲ್ಲಿ ಬಿದ್ದುಹೋಗಿ ಸಂಯುಕ್ತವಾಗಿ ಕೆಲಸ ಮಾಡಲು ಒಪ್ಪಿಗೆಯನ್ನು ಕೊಡಲಿಲ್ಲ. ಒರುತ್ತಾ ಒರುತ್ತಾ ಕಾಲದ ಬವಲಾವಣೆಯಿಂದ "ನನ್ನದು ಎಂಬುದನ್ನು ದೂರ ಮಾಡಿ. ಆಸ್ತಿಯಿದ್ದ ರೈತರೂ, ಆಸ್ತಿಯಿಲ್ಲದ ರೈತರೂ, ಜನಿವಾನುಗಳಿದ್ದ ಖಾಪಂದರೂ, ಕೂಲಿಯಿಂದ ಜೀವಿಸುವ ರೈತನೂ ಎಲ್ಲರೂ ಕಲೆತು ಸಂಯುಕ್ತವಾಗಿ ವ್ಯವಸಾಯ ಮಾಡಲು ಮೊದಲಿಟ್ಟರು. ಹೀಗೆ ಮಾಡುವಿಕೆಯಿಂದ ಬರುವ ಲಾಭವನ್ನು ಕೂಡ ಗ್ರಹಿಸಿದರು. ಒಳ್ಳೇ ಫಸಲನ್ನು ಬೆಳಿಸಲು ಅಳಕಾಶ, ಶಾಸ್ತ್ರೀಯವಾದ ಪದ್ಧತಿಗಳನ್ನನುಸರಿಸಿ ಬೇಸಾಯ ಮಾಡುವಿಕೆ, ಎಲ್ಲರಿಗೂ ಅಂದರೆ ಕಷ್ಟಪಟ್ಟು ಕೆಲಸ ಮಾಡುವವರಿಗೆಲ್ಲಾ ಸಾಕಾದಷ್ಟು ಆಹಾರ ವಸ್ತ್ರಗಳಿಗೆ ಒಂದು ಕಾಸು ವ್ಯಯವಿಲ್ಲದ ಯೂನಿವರ್ಸಿಟಿವರೆಗೂ ವಿದ್ಯೆ, ಉಚಿತವಾದ ವೈದ್ಯ ಸಹಾಯ, ಎಲ್ಲರಿಗೂ ಇನ್ಷೂರೆನ್ಸು, ಸಂಬಳದೊಡನೆ ರಜಾ, ಎಲ್ಲಕ್ಕೂ ಮುಖ್ಯವಾದದ್ದು ದೇಶದ ಸೌಭಾಗ್ಯ, ಶಿರಿ, ಸಂಪತ್ತು ಬೆಳೆ ಇವನ್ನೆಲ್ಲಾ ಕಣ್ಣು ತುಂಬಾ ಕಂಡರು. ಅನುಭವಿಸಿದರು. ಈಗ ವ್ಯಕ್ತಿಗತ ವ್ಯವಸಾಯದಾರರ ಸಂಖ್ಯೆಯು ದಿನದಿನಕ್ಕೆ ತಗ್ಗುತ್ತಿದೆ. ಕಲೆಕ್ಟಿವ್ ಫಾರಂಗಳ ದಿನದಿನಕ್ಕೆ ಅಭಿವೃದ್ಧಿಯಾಗುತ್ತಿವೆ (ನಿ. ಸೂ. ಒಂದು ರೂಬಲ್ಲಿಗೆ 2 ಶಿಲ್ಲಿಂಗು ಅಥವಾ 1-8-0 ರೂ. ಆದರೆ ಈ ದೇಶದಲ್ಲಿ 0-8-0 ಆಣೆಗೆ ಎಷ್ಟು ಸಾಮಾನುಗಳು ಬರುತ್ತವೋ ಅಷ್ಟು ಸಾಮಾನುಗಳನ್ನು ಕೊಳ್ಳಲು ಆ ದೇಶದಲ್ಲಿ ಒಂದು ರೂಬಲ್ಲಾ ಬೇಕಾಗುತ್ತದೆ. ಆದುದರಿಂದ ಈ ಲೇಖನದಲ್ಲಿ ಒಂದು ರೂಬಲ್ಲಿಗೆ ಅರ್ಧ ರೂಪಾಯಿ ಸಮನೆಂದು ಆ ರೀತಿಯಲ್ಲಿ ಲೆಕ್ಕವನ್ನು ಕೊಟ್ಟಿದೆ.)

ಎರಡನೇ ಇಸವಿಯಲ್ಲಿ ನಡೆಯುತಿರುವ ಟೀ ಪಾರ್ಟಿ

10–1–2039 ರಲ್ಲಿ ಅಂದರೆ ಇನ್ನು 98 ವರ್ಷಗಳು ಕಳೆದ ನಂತರ ನಡೆಯುತಿರುವ ಟೀ ಪಾರ್ಟಿಗೆ ಆ ಕಾಲದ ಅನೇಕ ಪ್ರಮುಖರನ್ನು ಆಮಂತ್ರಿಸಿದವರು ಕರೆಯುತಿರುವರು. ಆಗ 10–1–1939 ರಲ್ಲಿ ಬಾಂಬು ನಿಘಂಟಿನ ಸ್ಥಳದಲ್ಲಿ ಭೂಗರ್ಭದಲ್ಲಿ ಸ್ಥಾಪನೆ ಮಾಡಲ್ಪಟ್ಟಿರುವ ತೇಲೆಯುವ ಟೀ ಯನ್ನು ತಯಾರಿಸಲು ಉಪಯೋಗಿಸಲಿರುವರು.

ಸರ್ವೋಚ್ಚ ಮಂದಿರಗಳು

ಸೋವಿಯಟ್ ಪ್ಯಾಲೇಸ್ ಮಾಸ್ಕೋ ನಗರ ಎತ್ತರ 1300 ಅಡಿ, ಎಂಪೈರ್ ಸ್ಟೇಟ್ ಬಿಲ್ಡಿಂಗ್ ಸಂಯುಕ್ತ ಅಮೇರಿಕಾ 1250 ಅಡಿ ಎತ್ತರ, ಕಿಸ್ಲರ್ ಬಿಲ್ಡಿಂಗ್ ಸಂಯುಕ್ತ ಅಮೇರಿಕ ಎತ್ತರ 1048 ಅಡಿ, ಎಫಿಲ್ ಟವರ್ ಫ್ರಾನ್ಸ್ 984 ಅಡಿ ಎತ್ತರ.

ಜ್ಞಾನಶಕ್ತಿ)